# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2012-14
Date of Posting, Kodialbail post office
on 12th of every Month

ಸಂಪುಟ ೪ | ನೋಂದಣಿ ಸಂಖ್ಯೆ : KARBIL / 2005 / 16123 | ಜನವರಿ - 2015 | ಸಂಚಿಕೆ ೧


**ಶ್ರೀ ಸಭಾದ ಮುಂದಿನ ಕಾರ್ಯಕ್ರಮ : ತಾ. 18-01-2015ರಂದು ಚಲಿಸುವ ಬೃಹತ್ ದೋಣಿಯಲ್ಲಿ ಸಮುದ್ರ ವಿಹಾರ, ಹಾಡು–ನೃತ್ಯ–ಸಂಭ್ರಮ**

# ಶ್ರೀ ಸುಬ್ರಹ್ಮಣ್ಯ ಸಭಾದ 105ನೇ ವಾರ್ಷಿಕೋತ್ಸವ




ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇದರ 105ನೇ ವಾರ್ಷಿಕೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಸಿ.ಎಸ್. ರಾವ್ ರವರು, ಉಪಾಧ್ಯಕ್ಷರಾದ ಶ್ರೀ ಎಂ. ಆರ್. ವಾಸುದೇವ, ಡಾ. ಎ. ಪಿ. ಕೃಷ್ಣ, ಜೊತೆ ಕಾರ್ಯದರ್ಶಿ ಶ್ರೀ ಚೇತನ ಶರ್ಮ ಸೇರಿದಂತೆ ಶ್ರೀ ಸಭಾದ ಪದಾಧಿಕಾರಿಗಳು ಮತ್ತು ಸದಸ್ಯರ ಉಪಸ್ಥಿತಿಯಲ್ಲಿ ದೀಪಪ್ರಜ್ವಲನ ಹಾಗೂ ಶ್ರೀ ಸತ್ಯನಾರಾಯಣ ಪೂಜೆಯ ಪ್ರಾರ್ಥನೆಯನ್ನು ನೆರವೇರಿಸಿದರು. ಸಾಮೂಹಿಕ ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಹಾಗೂ ಲಲಿತಾ ಸಹಸ್ರನಾಮ ಪಾರಾಯಣದ ಅನಂತರ ಆಶುಭಾಷಣ, ಜಾನಪದ, ಭಾವಗೀತೆ ಸ್ಪರ್ಧೆ ನಡೆಯಿತು. ನಂತರ ನಡೆದ ಸರ್ವಸದಸ್ಯರ ಮಹಾಸಭೆಯು ಅಧ್ಯಕ್ಷರ ಸ್ವಾಗತದೊಂದಿಗೆ ಆರಂಭವಾಯಿತು.

ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ನೀಡಿದ 2013–14ರ ಆಡಳಿತ ವರದಿಗೆ ಹಾಗೂ ಮುಂದಿನ ವರ್ಷದ ಕಾರ್ಯಯೋಜನೆಗಳಿಗೆ ಸದಸ್ಯರ ಅದ್ಭುತ ಬೆಂಬಲ ವ್ಯಕ್ತವಾಯಿತು. 2013–14 ಪರಿಶೋಧಿತ ಲೆಕ್ಕಪತ್ರ, ಆಡಿಟ್ ವರದಿ, 2014–2015ರ ಅಂದಾಜು ಆಯ–ವ್ಯಯ ಪಟ್ಟಿಯನ್ನು ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಮಂಡಿಸಿದರು. ಅದನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಶ್ರೀ ನಾಗರಾಜ ಶರ್ಮರನ್ನು ಮುಂದಿನ ವರ್ಷದ ಲೆಕ್ಕಪರಿಶೋಧಕರಾಗಿ ನೇಮಿಸಲಾಯಿತು. ಶ್ರೀ ಜಗನ್ನಾಥ್ ರಾವ್ ಮತ್ತು ಶ್ರೀಮತಿ ಲಲಿತ ದಂಪತಿಗಳು ಶ್ರೀ ಸತ್ಯನಾರಾಯಣ ಪೂಜೆ ಹಾಗೂ ಮಂಗಳಾರತಿ ನೆರವೇರಿಸಿದರು. ಜೊತೆ ಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ. ಎಸ್. ಧನ್ಯವಾದ ನೀಡಿದರು. ಭೋಜನದ ಅನಂತರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವೈಯಕ್ತಿಕ ನೃತ್ಯಗಳು, ಶ್ರೀಮತಿ ಅನುರಾಧ ರಾವ್ ನಿರ್ದೇಶನದ ಪುರುಷ ಹಾಗೂ ಮಹಿಳಾ ತಂಡಗಳ ನೃತ್ಯವನ್ನು ಪ್ರದರ್ಶಿಸಲಾಯಿತು. ಮಹಿಳಾ ವೇದಿಕೆಯ ಶ್ರೀಮತಿ ಶೈಲಜಾ ಶ್ರೀಕಾಂತ್, ಶ್ರೀಮತಿ ಅರುಣಾ ಸೋಮಶೇಖರ್, ಶ್ರೀಮತಿ ಕುಸುಮ ನವೀನ ಕುಮಾರ್ ಕಾರ್ಯಕ್ರಮ ಸಂಯೋಜಿಸಿದರೆ, ಯುವ ವೇದಿಕೆಯ ಶ್ರೀ ಸುರೇಶ್ ಕಡಬ ಕಾರ್ಯಕ್ರಮ ನಿರ್ವಹಿಸಿದರು. ಬಹುಮಾನ ವಿತರಣೆ, ಧನ್ಯವಾದ ಸಮರ್ಪಣೆ ಮತ್ತು ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.




**ಪುರುಷ ಸಮೂಹ ನೃತ್ಯದ ಕಲಾವಿದರು**

ಶ್ರೀ ಅನಿಲ್ ರಾವ್ ಬಿ. ಎಸ್.
ಶ್ರೀ ಪಿ. ಶ್ರೀಕಾಂತ್ ರಾವ್
ಶ್ರೀ ನಾಗರಾಜ ಶರ್ಮ
ಶ್ರೀ ಸಂಜಯ ಕುಮಾರ್ ಪಲಿಮಾರ್
ಶ್ರೀ ಸೋಮಶೇಖರನ್ ಎಸ್.

### ಶ್ರೀ ಸಭಾದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ನಡೆದ ಸ್ಪರ್ಧೆಗಳ ವಿಜೇತರು

**ಆಶುಭಾಷಣ ಸ್ಪರ್ಧೆ :**

1. ಸಂಜಯ್ ಕುಮಾರ್ ಪಲಿಮಾರ್
2. ಕೆ. ಪ್ರಭಾಕರ್ ರಾವ್

**ಅಡುಗೆ ಸ್ಪರ್ಧೆ :**

**ಸಿಹಿ ತಿಂಡಿ**

1. ಚೈತ್ರ ಸುನಿಲ್ ರಾವ್
2. ಸುಹಾಸಿನಿ ರಾವ್

**ಖಾರ ತಿಂಡಿ**

1. ಚೈತ್ರ ಸುನಿಲ್ ರಾವ್
2. ಕನಕವಲ್ಲಿ ಹರ್ಷಕುಮಾರ್

**ಭಾವಗೀತೆ ಮತ್ತು ಜಾನಪದ ಗೀತೆ :**

**16 ವರ್ಷದ ಮೇಲಿನ ವಿಭಾಗ**

1. ಸ್ವಾತಿ ಪ್ರಮೋದ್
2. ಬೃಂದಾ ಜೋಷಿ

**16 ವರ್ಷದ ಕೆಳಗಿನ ವಿಭಾಗ**

1. ವಂದನಾ ರಾಣಿ
2. ಶೃತಿ ಕೆ.

*ಚಿತ್ರ : ಶ್ರೀ ರಘುವೀರ್ ಪೆರ್ಡೂರು*
*ವರದಿ : ಶ್ರೀ ಪಿ. ಶ್ರೀಕಾಂತ್ ರಾವ್*

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

**ಚಲಿಸುವ ಬೃಹತ್ ದೋಣಿಯಲ್ಲಿ**
**ಸಮುದ್ರ ವಿಹಾರ**
**ಹಾಡು - ನೃತ್ಯ - ಸಂಭ್ರಮ**



ತಾ. 18-01-2015ರ ಆದಿತ್ಯವಾರ ಬೆಳಗ್ಗೆ ಗಂಟೆ 9-30ಕ್ಕೆ ಸುಲ್ತಾನ್‌ಬತ್ತೇರಿಯಿಂದ ಹೊರಡುವುದು.

**ಒಬ್ಬರಿಗೆ ಶುಲ್ಕ ರೂ. 300-00**
**5ರಿಂದ 12 ವರ್ಷದ ಒಳಗಿನ ಮಕ್ಕಳಿಗೆ ರೂ. 200-00**

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಹೆಸರು ನೋಂದಾಯಿಸಬೇಕಾಗಿ ವಿನಂತಿ.

***ಹೆಚ್ಚಿನ ಮಾಹಿತಿ :***

**ಶ್ರೀ ಅನಿಲ್ ರಾವ್ ಬಿ. ಎಸ್.**
ಮೊಬೈಲ್ : 9880037110

**ಶ್ರೀ ಪಿ. ಶ್ರೀಕಾಂತ್ ರಾವ್**
ಮೊಬೈಲ್ : 9343361618

**ಶ್ರೀಮತಿ ಅರುಣಾ ಸೋಮಶೇಖರ್**
ಮೊಬೈಲ್ : 9880413243
2452860

## ತಲೇಕಿ ಶ್ರೀ ಶ್ರೀನಿವಾಸ ದೇವಸ್ಥಾನ, ಕಡಬ
**ಪುತ್ತೂರು ತಾಲೂಕು, ದ. ಕ.**

ಪ್ರಿಯ ಧರ್ಮಾಭಿಮಾನಿಗಳೇ,

ಸ್ವಸ್ತಿ ಶ್ರೀ ಜಯ ನಾಮ ಸಂವತ್ಸರದ ಮಾಘ ಮಾಸ ೨೩, ಶುಕ್ಲ ಪಕ್ಷ ೭ ಸಲುವ, ರಥಸಪ್ತಮಿ ದಿನ, ದಿನಾಂಕ 26–1–2015ನೇ ಸೋಮವಾರದಂದು

**ಶ್ರೀ ಶ್ರೀ ಶ್ರೀ ಶೃಂಗೇರಿ ಪೀಠದ ಮಹಾಜಗದ್ಗುರುಗಳವರ ದಿವ್ಯಹಸ್ತದಿಂದ**
**ಪುನಃ ಪ್ರತಿಷ್ಠಾಪಿಸಲ್ಪಟ್ಟ ತಲೇಕಿ ಶ್ರೀ ಶ್ರೀನಿವಾಸ ದೇವಸ್ಥಾನದ**

### ಪ್ರತಿಷ್ಠಾ ವಾರ್ಷಿಕೋತ್ಸವವು

**ಬ್ರಹ್ಮಶ್ರೀ ವಾಗೀಶ ತಂತ್ರಿಗಳ** ನೇತೃತ್ವದಲ್ಲಿ ಜರಗಲಿರುವುದು.

ಆ ಪ್ರಯುಕ್ತ ತಾವೆಲ್ಲರೂ ಈ ದೇವತಾ ಕಾರ್ಯಗಳಲ್ಲಿ ಸಹಭಾಗಿಗಳಾಗಿ ಶ್ರೀ ದೇವರ ಪೂರ್ಣಾನುಗ್ರಹಕ್ಕೆ ಪಾತ್ರರಾಗಬೇಕೆಂದು ಅಪೇಕ್ಷಿಸುವ ತಮ್ಮ ಆಗಮನಾಭಿಲಾಷಿಗಳು

| | | |
|---|---|---|
| **ಶ್ರೀ ಕೆ. ಸೋಮಶೇಖರ ರಾವ್** | **ಶ್ರೀ ಶಶಿರಾಜ್** | **ಶ್ರೀ ಕೆ. ಹರ್ಷಕುಮಾರ್** |
| ಮುಂಬೈ | ಅರ್ಚಕರು | ಅಧ್ಯಕ್ಷರು, ಉತ್ಸವ ಸಮಿತಿ |

***ತಾ. 25-01-2015ನೇ ಆದಿತ್ಯವಾರ ರಾತ್ರಿ ಗಂಟೆ 9-00 ಮನೋರಂಜನಾ ಕಾರ್ಯಕ್ರಮಗಳು ಹಾಗೂ ಕೊಲ್ಲಂಗಾನ ಮೇಳದವರಿಂದ ಯಕ್ಷಗಾನ ಬಯಲಾಟ ಜರಗಲಿರುವುದು.***

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :
**ಎಂ. ಎಸ್. ರಘುನಾಥ ರಾವ್ ಪುತ್ತೂರು**
ಮೊಬೈಲ್ : 9448481696

ಸಂಪಾದಕರು :
**ಪಿ. ಶ್ರೀಕಾಂತ ರಾವ್**
ಮೊಬೈಲ್ : 9343361618

ಸಂಪಾದಕ ಮಂಡಳಿ :
**ನಾಗರಾಜ್ ವರ್ಕಾಡಿ**
**ರಘುವೀರ್ ಪೆರ್ಡೂರು**
**ಟಿ. ಬಿ. ಮೋಹನ್ ರಾವ್**
**ಸ್ವಾತಿ ಪ್ರಮೋದ್ ಕ್ಯಾದಿಗೆ**

ಆರ್ಥಿಕ ಸಲಹಾ ಸಮಿತಿ :
**ಕರುಣ್ ರಾವ್ ಬೆಳ್ಳೆ**
**ಅನಿಲ್ ರಾವ್ ಬಿ. ಎಸ್.**

ಗೌರವ ಸಲಹೆಗಾರರು :
**ಚೇತನ್ ಶರ್ಮ**
**ಶ್ರೀಮತಿ ಅರುಣಾ ಸೋಮಶೇಖರ್**

ಪ್ರಕಾಶಕರು :
**ಸಿ. ಎಸ್. ರಾವ್, ಉಡುಪಿ**


## ಬದುಕಲು ಕಲಿ

ಕಾಲಿಗೆ ಮುಳ್ಳು ಚುಚ್ಚಿತೆಂದು ನರಳಾಡಬೇಡ
ಪಾದದಲ್ಲಿಟ್ಟುಕೊಂಡೇ ನಡೆದಾಡಬೇಡ
ಕಿತ್ತು ಎಸೆ, ನೋವಾಗಬಹುದು
– ಗಾಯ ಮಾಗಬಹುದು
ಹೆಜ್ಜೆ ಹಿಂದಿಡಬೇಡ, ಧೈರ್ಯ ಕೆಡಬೇಡ
ಸಹಿಸುವುದು ಅನಿವಾರ್ಯ, ಗುರಿ ಮರೆಯಬೇಡ.

## ನನ್ನವನಲ್ಲ

ಯೌವನದ ಹುಚ್ಚು ಹೊಳೆಯಲ್ಲಿ
ಉಕ್ಕುಕ್ಕಿ ಹರಿವ ಪ್ರವಾಹ ನೀನು.
ನೀ ಸೆಳೆದಂತೆ ಕುಣಿವ ತರಗೆಲೆ ನಾನು.
ನಿನ್ನೊಡನೆ ಸಂಸಾರ ಸಾಗರದಲ್ಲಿ,
ಬೆರೆವ ಕನಸ ಕಾಣುತ್ತಿದ್ದಂತೆಯೇ
ಸುಳಿಯಲ್ಲಿ ತಳ್ಳಿ, ಕೈ ಬಿಟ್ಟೆಯಲ್ಲೋ
ನಲ್ಲ – ನೀ ನನ್ನವನಲ್ಲ.



## ಯೌವನ

ವರ್ಷಾದಾದಿಯಲಿ ಸಣ್ಣಗೆ,
ಅಂತ್ಯದಲಿ ತಣ್ಣಗೆ ಹರಿವ ನದಿ
ಮಧ್ಯದಲಿ ಬಂದ ಪ್ರವಾಹದಿಂದ
ಹುಚ್ಚೆದ್ದು ಉಕ್ಕಿ, ಕಂಡಲ್ಲಿ ನುಗ್ಗಿ
ಸಿಕ್ಕಿದ್ದ ದೋಚಿ, ಮತ್ತೆ ಸೊಕ್ಕಿಳಿದು
ತಣ್ಣಗಾದಂತೆ – ಯೌವನದ ಕಾಲ.

## ಅಂತರ

ಬಂಧುಗಳ ಸಂಬಂಧ ನೂಲಿನೆಳೆಯಂತೆ.
ಎರಡು ಕೊನೆ ದೂರವಿರೆ ನೇರನಂಟು.
ಬಳಿ ಇರಲು ಸಿಕ್ಕು ಗಂಟು.

**– ಶ್ರೀಮತಿ ರಾಜೇಶ್ವರಿ ಕುಮಾರ ರಾವ್**



## ವರ್ಷಧಾರೆ

**– ಅನುಜಾತೆ**

ಚಳಿಯ ಬಾಧೆಗೆ ಬೆದರಿ
ರೆಕ್ಕೆ ಪುಕ್ಕವ ಮುದುರಿ
ಹಕ್ಕಿ ಅವಿತಿತು ತನ್ನ ಗೂಡಿನಾಗೆ

ನಭವನಾಚ್ಛಾದಿಸಿದ
ಕೃಷ್ಣಮೇಘದ ಮಾಲೆ
ಪೂರ್ಣಚಂದ್ರನ ತುಂಬುಗೊರಳ ಬಳಸಿತ್ತು

ತುಂಟು ಮೋಡದ ತುಣುಕು
ಗುಂಪ ತಪ್ಪಿಸಿಕೊಂಡು
ಚಂದಿರನ ಮೊಗಕೆ ಕರಿಬಣ್ಣವೆರಚಿತ್ತು

ಕತ್ತಲೆಯ ರಾಜ್ಯದಲಿ
ಮಿಣುಕು ಹುಳುಗಳ ಕುಣಿತ
ಕಪ್ಪೆ ಜೀರುಂಡೆಗಳ ಮಿಶ್ರ ಸಂಗೀತ

ಬಾಯಾರಿ ಬಾಯ್ದೆರೆದ
ಭುವಿಯ ತೃಷೆಯನು ತಣಿಸೆ
ಬಾನು ಸುರಿಸಿತು ತಂಪು ವರ್ಷಧಾರೆ

ಕಂಪು ಸೂಸಿತು ಧರಣಿ
ಕೃಪಣನಂದದಿ ಹೀರಿ
ಸುರಿವ ಜಲಧಾರೆಯದು ಗರ್ಭಸೇರೆ

ಧೂಳು ಮುಸುಕಿದ ವೃಕ್ಷ
ಮೈದೊಳೆದು ಗೆಲುವಾಗಿ
ತಲೆಯ ತೂಗಿತು ಗಾಳಿ ಲಾಲಿಯಾಗಿ

ಮಳೆನೀರು ಜಾರಿ
ಒಣಕೆರೆ ತೊರೆಯ ಸೇರಿ
ಕಿವಿಗಿಂಪ ನೀಡಿತು ನೀರು ಹರಿವ ಮೊರೆತ

ಒಡಲುರಿಯು ತಣಿದು
ಭೂತಾಯಿ ಸಂತಸತಳೆದು
ಮೇಘರಾಜಿಗೆ ಕೈಯ್ಯ ಮುಗಿಯುತಿಹಳು

ನಿನ್ನೊಡಲು ಬರಿದಾಗೆ
ಆವಿಯಾ ರೂಪದೊಳು
ಈ ಜಲವ ಮರಳಿಸುವೆ ಎನುತಲಿಹಳು.



ದಿನಾಂಕ : 2-01-2015
ಸ್ಥಳ : ಬೆಳುವಾಯಿ

ಸಮಾಜ ಬಂಧುಗಳಿಗೆ ನಿಮ್ಮ ಪ್ರೀತಿಯ ಎಂ. ದೇವಾನಂದನ ಸಪ್ರೇಮ ನಮಸ್ಕಾರಗಳು. ನಾನು ಕ್ಷೇಮ. ನೀವೆಲ್ಲರೂ ಕ್ಷೇಮವೆಂದು ಭಾವಿಸುತ್ತೇನೆ. ಸಾಂಪ್ರತ : ಮೇಲಾಗಿ ತಿಳಿಸುವುದೇನೆಂದರೆ,
ಇದೇ ಬರುವ ದಿನಾಂಕ 25-01-2015ನೇ ಆದಿತ್ಯವಾರ ಬೆಳುವಾಯಿ ಬನಡ್ಕ ಶ್ರೀ ರಾಘವೇಂದ್ರ ಮಠದಲ್ಲಿ ದಿವಾಘಂಟೆ 08-12ರ ಕುಂಭ ಲಗ್ನ ಸುಮುಹೂರ್ತದಲ್ಲಿ–
ನನ್ನ ಸುಪುತ್ರ
**ದಿವಿಜೇಶ್**ನಿಗೆ **ಬ್ರಹ್ಮೋಪದೇಶ** ಕೊಡುವುದಾಗಿ ನಿಶ್ಚಯಿಸಿರುತ್ತೇನೆ.
ಅಲ್ಲದೆ **ನಮ್ಮ ಬೆಳುವಾಯಿ "ಶೋಭಾ ಡಿಜಿಟಲ್ ಸ್ಟುಡಿಯೋ"ದ ವಿಂಶತಿ** ಪ್ರಯುಕ್ತ ಅದೇ ದಿನ ಸಂಜೆ 4-30ರಿಂದ ಬೆಳುವಾಯಿ ಬಸ್‌ಸ್ಟ್ಯಾಂಡಿನ ಬಳಿ ಇರುವ 'ಮಹಾವೀರ ಮಂಟಪ'ದಲ್ಲಿ
**ಗೀತಾ ಸಾಹಿತ್ಯ ಸಂಭ್ರಮ** ಎಂಬ ಕಾರ್ಯಕ್ರಮವು ಜರಗಲಿರುವುದು.
ಬಳಿಕ ನಮ್ಮೀ ಸ್ಟುಡಿಯೋ ಸೆಂಟ್ರಲ್ ಕಾಂಪ್ಲೆಕ್ಸ್‌ನ ಸ್ವಂತ ನಿವೇಶನಕ್ಕೆ
**ಸ್ಥಳಾಂತರಗೊಂಡು ಶುಭಾರಂಭ**ಗೊಳ್ಳುವುದು.
ಆ ಪ್ರಯುಕ್ತ 20 ವರುಷಗಳ ಹಿಂದೆ ನಮ್ಮನ್ನು ಪ್ರೋತ್ಸಾಹಿಸಿ ಸಹಕರಿಸಿದವರನ್ನು ನೆನಪಿಸುವ ಕಾರ್ಯಕ್ರಮ ಜರಗಲಿದೆ. ತದನಂತರ ರಾತ್ರಿ ಗಂಟೆ 8-30ಕ್ಕೆ
ಶ್ರೀ ಕಟೀಲು ದುರ್ಗಾಪರಮೇಶ್ವರೀ ಯಕ್ಷಗಾನ ಮೇಳದವರಿಂದ ಯಕ್ಷಗಾನ ಬಯಲಾಟ
**ಶ್ರೀ ದೇವೀ ಮಹಾತ್ಮೆ** ನಡೆಯಲಿರುವುದು.
ಹಾಗೂ ಇದರೊಂದಿಗೆ **ವಿಶೇಷ ಸತ್ಕಾರ ಕೂಟ** ನೆರವೇರಲಿರುವುದು.
ತಾವೆಲ್ಲರೂ ಬಂಧು-ಮಿತ್ರರೊಡನೆ ಆಗಮಿಸಿ ನಮ್ಮನ್ನು ನಮ್ಮ ಸಂಸ್ಥೆಯನ್ನು ಹರಸಿ ಹಾರೈಸಬೇಕೆಂದು ವಿನಂತಿಸುವ ನಿಮ್ಮವನೇ ಆದ **ದೇವಾನಂದ**



ನಿಮ್ಮದೇ ಸ್ಟುಡಿಯೋ
**"ಶೋಭಾ"**
ಬೆಳುವಾಯಿ / ಮೂಡಬಿದರೆ / ಎಡಪದವು
ಮೊಬೈಲ್ : 9845644556, 7353006387; mdevanandabhat@gmail.com

ಸಕಾಲದಲ್ಲಿ ಆಮಂತ್ರಣ ಸಿಗದವರು ಇದನ್ನೇ ಆಮಂತ್ರಣವೆಂದು ತಿಳಿದು ಆಗಮಿಸಿ ಹರಸಿ.

# ದೇವರನ್ನೇಕೆ ನಂಬಬೇಕು?



ಲೇಖಕರು : **ಹರಿಹರ ರಾವ್ ಎನ್. ಎಸ್.** ಚರವಾಣಿ : 996459110
ವಿಳಾಸ : 'ಶಾಂತಿ ಸದನ', ಶ್ಯಾರ, ಅಂಚೆ : ಕೊಡಿಪ್ಪಾಡಿ, ಪುತ್ತೂರು (ದ. ಕ.)

ದೇವರ ವಿಚಾರ ಬಂದಾಗ ಅನೇಕರು (ಅವರು ನಾಸ್ತಿಕರೇ ಆಗಬೇಕೆಂದಿಲ್ಲ) ವಿಜ್ಞಾನ, ವೈಜ್ಞಾನಿಕ ಮನೋಭಾವ, ವೈಚಾರಿಕತೆ ಮುಂತಾದ ವಿಷಯಗಳನ್ನು ಪ್ರಸ್ತಾಪಿಸುವುದನ್ನು ಕಾಣುತ್ತೇವೆ. ಆದರೆ ಅನಂತ ಅವ್ಯಕ್ತ ಹಾಗೂ ಸೀಮಾತೀತವಾದ ವಿಷಯ ವಸ್ತುವನ್ನು ಮಾನವನ ಲೌಕಿಕ ಗ್ರಹಣಶಕ್ತಿಗೆ ಸೀಮಿತವಾದ ಕಾಲಕಾಲಕ್ಕೆ ಬದಲಾಗುತ್ತಾ–ಸುಧಾರಣೆಗೊಳ್ಳುತ್ತಾ ಸಾಗುತ್ತಿರುವ ವಿಜ್ಞಾನದ ಮೂಲಕ ಗ್ರಹಿಸಲು ಸಾಧ್ಯವೇ? ವಿಜ್ಞಾನದ ಸಹಾಯದಿಂದ ನಾವು ಅರಿತುಕೊಂಡಿರುವ ಸಂಗತಿಗಳು ಈ ಅಗಾಧವಾದ ಬ್ರಹ್ಮಾಂಡವನ್ನು ನಿಖರವಾಗಿ ವಿವರಿಸುವಲ್ಲಿ ಯಶಸ್ವಿಯಾಗಿದೆಯೇ? ಇಲ್ಲ ಎಂದಾದರೆ ಆ ವಿಷಯಗಳನ್ನು ವಿವರಿಸುವ ಬಗೆಎಂತು? ನಮ್ಮ ಭೂಮಿಯನ್ನೊಳಗೊಂಡಿರುವ ಸೌರಮಂಡಲದಂತಹಾ ಕೋಟ್ಯಂತರ ಗ್ರಹ–ನಕ್ಷತ್ರ ಸಮೂಹಗಳು ನಮ್ಮ "ಕ್ಷೀರಪಥ" ಗ್ಯಾಲಕ್ಸಿಯಲ್ಲಿದೆ. ಇಂತಹಾ ಕೋಟ್ಯಂತರ ಗ್ಯಾಲಕ್ಸಿಗಳು ಈ ಬ್ರಹ್ಮಾಂಡದಲ್ಲಿವೆ. ಇಂತಹ ಕೋಟ್ಯಂತರ ನಕ್ಷತ್ರಗಳು ಹೇಗಿರುತ್ತವೆ. ಅವುಗಳ ಗ್ರಹಗಳ ವಿಚಾರವೇನು? ಇವೆಲ್ಲಾ ಇನ್ನೂ ತಿಳಿದಿಲ್ಲ. ಹಾಗಾಗಿ ಮಾನವನಿಗೆ ತಿಳಿದಿರುವ ವಿಷಯ ಭೂಮಿ ಗಾತ್ರವಾದರೆ ತಿಳಿಯಬೇಕಾದ್ದು ಬ್ರಹ್ಮಾಂಡ ಗಾತ್ರವೆಂದು ಹೇಳಬೇಕಾಗುತ್ತದೆ. ಆದ್ದರಿಂದ ಈ ಪ್ರಪಂಚ ವನ್ನು ನಿಯಂತ್ರಿಸುವ ಒಂದು ಶಕ್ತಿಯಿದೆ ಎಂದು ಮಾನವನು ಒಪ್ಪಿಕೊಂಡು ಆ ಶಕ್ತಿಯನ್ನೇ ದೇವರೆಂದು ಕರೆದು ಆರಾಧಿಸಲು ಪ್ರಾರಂಭಿಸಿದ್ದು ಸಹಜವೆಂದು ತಿಳಿಯ ಬಹುದು. ಆ ಶಕ್ತಿಗೆ ಬೇರೆ ಬೇರೆ ರೂಪ–ಹೆಸರು ಕೊಟ್ಟು ಕತೆ ಕಟ್ಟಿಕೊಂಡು ಮಾನವನು ತನ್ನ ಬದುಕಿಗೊಂದು ಚೌಕಟ್ಟು, ಶಿಸ್ತು, ಪ್ರೇರಣೆ, ಗುರಿ, ನೈತಿಕ ಮೌಲ್ಯಗಳನ್ನು ತಂದುಕೊಂಡಿದ್ದಾನೆ ಎಂದರೆ ಅಲ್ಲಗಳೆಯುವಂತಿಲ್ಲ.

ದೇವರೆಂಬ ಶಕ್ತಿ ಹೊರಗೆ ಗೋಚರವಾಗದಿದ್ದರೂ ಈ ಪ್ರಕೃತಿಯನ್ನೂ ಮತ್ತು ಪ್ರಪಂಚವನ್ನೂ ಅವುಗಳ ನಿಯಮಬದ್ಧತೆಯನ್ನೂ ಗಮನಿಸಿದರೆ ಇಲ್ಲಿ ಒಂದು ಅಗೋಚರ ಶಕ್ತಿಯ ಕೈವಾಡವನ್ನು ಕಾಣಲು ಸಾಧ್ಯವಲ್ಲವೇ? ಆದ್ದರಿಂದಲೇ ಬಲ್ಲವರು ವಿಜ್ಞಾನವನ್ನೂ ಸ್ಥೂಲ ಅಥವಾ ವ್ಯಕ್ತ ವಿಭಾಗ (Gross aspect of the Universe) ಎಂದೂ ದೇವರನ್ನು ಸೂಕ್ಷ್ಮ ವಿಭಾಗ (Subtle aspect of the Universe) ಎಂದೂ ಹೇಳುತ್ತಾರೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ನಮಗೆ ತಿಳಿದಿರುವ ಬ್ರಹ್ಮಾಂಡದ ವಿಷಯವು ವಿಜ್ಞಾನವೆಂದೂ, ತಿಳಿಯಲಸಾಧ್ಯವಾದ ಹಾಗೂ ನಿಗೂಢವಾಗಿರುವ ವಿಷಯಗಳೆಲ್ಲವೂ ದೇವರಿಗೆ ಸಂಬಂಧಿಸಿದ್ದೆಂದೂ ತಿಳಿಯಬಹುದು. ಈ ರೀತಿ ನಮಗೆ ತಿಳಿಯದ, ನಿಗೂಢ ವಾದ ಅನೇಕ ವಿಷಯಗಳು ಜಗತ್ತಿನಲ್ಲಿ ಇರುವುದರಿಂದಲೇ ದೇವರು ಎಂಬ ಶಕ್ತಿಗೆ ಪ್ರಾಮುಖ್ಯತೆ ಬಂದಿದ್ದು.

ನ್ಯೂಟನ್ನನ ನಿಯಮದ ಪ್ರಕಾರ ಪ್ರತಿಯೊಂದು ಕ್ರಿಯೆಗೂ ಸಮನಾದ ಮತ್ತು ವಿರುದ್ಧವಾದ ಪ್ರತಿಕ್ರಿಯೆ ಇರುತ್ತದೆ. ನಾವು ದೇವರನ್ನು ಆರಾಧಿಸುವ ಅನೇಕ ಕ್ರಿಯೆಗಳನ್ನು ಮಾಡುತ್ತೇವೆ. ಈ ಕ್ರಿಯೆಗಳಿಗೆ ಪ್ರತಿಕ್ರಿಯೆ ಇರದೇ ಇರಲು ಸಾಧ್ಯವೇ? ಭಜನೆಯೋ, ಪೂಜೆಯೋ, ಬ್ರಹ್ಮಕಲಶವೋ, ಅಭಿಷೇಕವೋ, ಮಂತ್ರಘೋಷವೋ ಅಥವಾ ಇನ್ನಾವುದೇ ರೀತಿಯ ಆರಾಧನೆಯೇ ಇರಲಿ ಅವೆಲ್ಲವೂ ಕ್ರಿಯೆಗಳೇ ಆಗಿವೆ. ಆದ್ದರಿಂದ ಅವುಗಳಿಗೆ ಪ್ರತಿಕ್ರಿಯೆ ಬಾರದಿರಲು ಸಾಧ್ಯವೇ? ತ್ರಿಕಾಲ ಪೂಜೆಯಲ್ಲೋ, ಗಣಹೋಮದಲ್ಲೋ ಅಥವಾ ಬೇರಾವುದೇ ಸಂದರ್ಭದಲ್ಲಿಯೋ ಹಾಕುವ ಮಂಡಲ ಮತ್ತು ಮಾಡುವ ಅಲಂಕಾರವು ದೈವ ಸಾಕ್ಷಾತ್ಕಾರದ ಕ್ರಿಯೆಯಾದರೆ, ಪ್ರತಿಕ್ರಿಯೆಯಾಗಿ ಪೂಜಾರ್ಥಿ ಪಡೆಯುವ ಪ್ರೇರಣೆ, ಸಂತೃಪ್ತಿ ನೆಮ್ಮದಿ, ಧನ್ಯತಾಭಾವ, ಸಂತೋಷಗಳು ದೇವರ ಪ್ರಭಾವವೆಂದು ತಿಳಿಯಬಹುದು. ಆದರೆ ಇದನ್ನು ಸೂತ್ರದಲ್ಲಿ ಅಳವಡಿಸಲು ಸಾಧ್ಯವಿಲ್ಲ. ಏಕೆಂದರೆ ಆ ಶಕ್ತಿ ನಿಗೂಢವಾಗಿದೆ.

ಒಬ್ಬ ಶಿಲ್ಪಿ ಒಂದು ಕಲ್ಲಿನ ಪ್ರತಿಮೆಯನ್ನು ನಿರ್ಮಿಸಲು ಅನೇಕ ಕ್ರಿಯೆಗಳನ್ನು ಮಾಡುತ್ತಾನೆ. ಆಮೇಲೆ ಬ್ರಹ್ಮಕಲಶಾದಿ ಆವಾಹನಾ ವಿಧಿವಿಧಾನಗಳು ನಡೆದಾಗ ಆ ಮೂರ್ತಿ ಯನ್ನು ದೇವರೆಂದು ಪೂಜಿಸಲು ಪ್ರಾರಂಭಿಸುತ್ತಾರೆ. ಈ ರೀತಿ ಶಿಲ್ಪಿ ಹಾಗೂ ಅರ್ಚಕರು ನಡೆಸುವ ಕ್ರಿಯೆಗಳಿಗೆ ದೊರೆಯುವ ಪ್ರತಿಕ್ರಿಯೆಯೇ ದೇವರ ಸಾನ್ನಿಧ್ಯದ ಕಲ್ಪನೆ ಮತ್ತು ಜನರಲ್ಲಿ ಮೂಡುವ ಭಕ್ತಿಭಾವ "ಅರ್ಚನಸ್ಯ ಪ್ರಭಾವೇನ ಶಿಲಾಭವತಿ ಶಂಕರ" ಎಂಬಂತೆ ನಿತ್ಯವೂ ನಡೆಯುವ ಪೂಜೆಗಳಿಂದ ದೇವಸ್ಥಾನಗಳು ಮಹತ್ತರವಾದ ಶಕ್ತಿ ಕೇಂದ್ರಗಳಾಗಿ ಜನರನ್ನು ಆಕರ್ಷಿಸುತ್ತವೆ. ಜನರ ದೃಢವಾದ ನಂಬಿಕೆಯ ಕ್ರಿಯೆಯು ಸಾಕಾರಗೊಂಡಾಗ ದೇವತಾ ಶಕ್ತಿಯು ಪ್ರತಿಕ್ರಿಯಾ ರೂಪದಲ್ಲಿ ಗೋಚರ ವಾಗುತ್ತದೆ.

ಇನ್ನು ದೇವರಿಂದ ಅಥವಾ ದೇವರೆಂಬ ನಂಬಿಕೆ ಯಿಂದ ಏನಾದರೂ ಪ್ರಯೋಜನವಿದೆಯೇ ಎಂದು ಯೋಚಿಸಿದರೆ ಸಿಗುವ ಉತ್ತರ ಹೌದು ಮತ್ತು ಅದು ಅಗಾಧ ಎಂಬುದು. ದೈವಕಲ್ಪನೆಯು ಮಾನವನ ಆರ್ಥಿಕ, ಸಾಮಾಜಿಕ, ನೈತಿಕ, ಭೌತಿಕ ಹಾಗೂ ಅಧ್ಯಾತ್ಮಿಕ ಸ್ತರಗಳಲ್ಲಿ ಮಹತ್ತರವಾದ ಪರಿಣಾಮವನ್ನು ಉಂಟುಮಾಡಿದೆ. ಉದ್ಯೋಗ ಸೃಷ್ಟಿಯಲ್ಲಿ, ಪ್ರವಾಸೋದ್ಯಮದಲ್ಲಿ, ಸಮಾಜದ ನೀತಿನಿರೂಪಣೆಯಲ್ಲಿ ದೇವಾಲಯಗಳ ಪಾತ್ರ ಬಹಳ ಹಿರಿದು. ಇತ್ತೀಚಿನ ದಿನದಲ್ಲಿ ನಗರಗಳಲ್ಲಿ ವ್ಯಾಪಾರ ವಹಿವಾಟಿನ ಅಭಿವೃದ್ಧಿಗಾಗಿ "ಟ್ರೇಡ್ ಫೇರ್"ಗಳನ್ನು ಸಂಘಟಿಸುವುದನ್ನು ನಾವು ಕಾಣುತ್ತೇವೆ. ನಮ್ಮ ಪೂರ್ವಜರು ಅನಾದಿಕಾಲದಿಂದಲೇ ಹಳ್ಳಿ ಹಳ್ಳಿಗಳಲ್ಲಿ ದೇವರ ಹೆಸರಲ್ಲಿ ಜಾತ್ರೆಗಳನ್ನು ನಡೆಸಿ ಆ ಮೂಲಕ ಸುತ್ತಮುತ್ತಲಿನ ಗ್ರಾಮಗಳ ಜನರನ್ನು ಆಕರ್ಷಿಸಿ ವ್ಯಾಪಾರ ನಡೆಸುವ ಉಪಾಯವನ್ನು ಅರಿತಿದ್ದು. ಇಂದಿನ ದಿನಗಳಲ್ಲಿ ಪತ್ರಿಕೆ, ದೂರದರ್ಶನ, ರೇಡಿಯೋ ಮೂಲಕ ಜಾಹೀರಾತು ನೀಡಿ ಜನಸಾಮಾನ್ಯ ರನ್ನು ಆಕರ್ಷಿಸಬಹುದು. ಆದರೆ ಅಂದಿನ ಕಾಲದಲ್ಲಿ ಜನರನ್ನು ಆಕರ್ಷಿಸಲು ದೇವರೇ ಬೇಕಾಗಿತ್ತು.

ದೇವರ ಭಯದಿಂದ ಹೆಚ್ಚಿನ ಜನರು ಕೆಟ್ಟ ಕೆಲಸ ಗಳನ್ನು ಮಾಡಲು ಹಿಂಜರಿಯುತ್ತಾರೆ ಎಂಬುದು ಸತ್ಯ. ಹಾಗಂತ ದೇವರ ಹೆಸರಿನಲ್ಲೇ ಕೆಟ್ಟ ಕೆಲಸ ಮಾಡುವವರು ಇಲ್ಲವೆಂದಲ್ಲ, ಆದರೆ ಒಳ್ಳೆಯ ಕೆಲಸಗಳಾದ ಪರೋಪಕಾರ, ದಯೆ–ಕ್ಷಮೆ, ದಾನಧರ್ಮಗಳನ್ನು ಮಾಡಲು ದೈವಪ್ರೇರಣೆಯು ಕಾರಣ ಎನ್ನುವುದು ಸೂರ್ಯನಷ್ಟು ಸತ್ಯ. ದೈವ ಸೇವೆಯಿಂದ ಮಾನವ ಪಡೆಯುವ ಮಾನಸಿಕ ನೆಮ್ಮದಿ, ಸತ್ಪ್ರೇರಣೆ, ಮಾರ್ಗದರ್ಶನಗಳು ನಿತ್ಯಜೀವನದಲ್ಲಿ ಧನಾತ್ಮಕ ಬದಲಾವಣೆಯನ್ನು ತರುತ್ತದೆ. ದೇವಾರಾಧನೆ, ಜಪ–ತಪಗಳಿಂದ ನರಮಂಡಲದ ಮೇಲಾಗುವ ಗುಣಾತ್ಮಕ ಬದಲಾವಣೆಗಳು ಮನುಷ್ಯನು ಬಾಹ್ಯವಾಗಿ ಸೇವಿಸುವ ಔಷಧೋಪಚಾರಗಳು ಹೆಚ್ಚು ಪರಿಣಾಮಕಾರಿಯಾಗುವಂತೆ ಮಾಡಬಲ್ಲವು. ಬೃಹತ್ತಾದ ದೈವ ಕಲ್ಪನೆಯ ಇದಿರು ತನ್ನ ಅಸ್ತಿತ್ವವು ಯಕಃಶ್ಚಿತ್ ಎಂದು ಕಂಡುಕೊಂಡು ಮಾನವನು ಇನ್ನಷ್ಟು ವಿನಮ್ರನಾಗುವ, ಸಮಾಜಕ್ಕೆ ಉಪಕಾರಿಯಾಗುವ ಮೂಲಕ ಸಮಾಜಮುಖಿಯಾಗುತ್ತಾನೆ. ಹಣ್ಣುಕಾಯಿ ಸಮರ್ಪಿಸುವಾಗ ತೆಂಗಿನಕಾಯಿಯನ್ನು ಒಡೆಯುವುದು ಮಾನವನು ತನ್ನ "ಅಹಂ" ಅನ್ನು ಒಡೆಯುವುದರ, ವಿಶ್ವ ಶಕ್ತಿಗೆ ಶರಣಾಗುವುದರ ಸಂಕೇತ. ಈ ರೀತಿ ಒಬ್ಬ ಸಾಮಾನ್ಯನೂ ದೈವ ನಂಬಿಕೆಯ ಮೂಲಕ ತನ್ನನ್ನು ತಾನು ತಿದ್ದಿಕೊಂಡು, ಇತರರ ಒಳ್ಳೆಯ ಗುಣಗಳನ್ನು ಗುರುತಿಸಿ–ಗೌರವಿಸಿ, ತಾನೂ ಅನುಸರಿಸಿ ಒಬ್ಬ ಸತ್ಪ್ರಜೆ ಯಾಗಿ ಸಮಾಜಕ್ಕೆ ಆದರ್ಶಪ್ರಾಯನಾಗಬಹುದು.

ಇನ್ನು ಕಲೆ–ಸಾಹಿತ್ಯ–ನಾಟ್ಯ ಪ್ರಕಾರಗಳಿಗೆ ದೈವಕಲ್ಪನೆ ಯಿಂದಾಗಿರುವ ಪ್ರಯೋಜನ ಅಪಾರವಾದುದು. ಸಂಗೀತದ ಹೆಚ್ಚಿನ ಹಾಡುಗಳು, ನೃತ್ಯ, ಶಿಲ್ಪ, ಚಿತ್ರಕಲೆಗಳು ಬೆಳೆದು ಬೆಳಗಿರುವುದು ದೈವಸ್ಫೂರ್ತಿಯಿಂದಲೇ ಎಂದರೆ ತಪ್ಪಾಗಲಾರದು. ಇಂದು ಮಾನವನು ಹಣದ, ಐಶ್ವರ್ಯದ, ಸುಖಲೋಲುಪತೆಯ ಬೆಂಬತ್ತಿ ಓಡುತ್ತಿದ್ದಾನೆ. ಅದು ಸಿಗದಿದ್ದಾಗ ಹತಾಶನಾಗುತ್ತಾನೆ. ನೆಮ್ಮದಿಯ ಸೆಲೆ ಕಳೆದುಕೊಳ್ಳುತ್ತಾನೆ. ಇಂತಹ ಸಂದರ್ಭಗಳಲ್ಲಿ ಅವನಿಗೆ ದೇವರ ನಂಬಿಕೆ ನೆರವಿಗೆ ಬರಬಹುದು. ಕತ್ತಲ ಗುಹೆಯಲ್ಲಿ ಬೆಳಕಿನ ಕಿಂಡಿ ಗೋಚರವಾದಂತೆ ಸಾಂತ್ವನ ನೀಡಬಹುದು. ಸ್ವಾತಿಕ ಗುಣಗಳನ್ನು ಪೋಷಿಸಲು ಪ್ರೇರೇಪಿಸಬಹುದು.

**ರಾಮಾ ಅಟೋಮೊಬೈಲ್ಸ್**





ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

*Prop. : P. Srikanth Rao* Mobile : 9343361618
**M/s. SAMARPAN**
*HOUSE OF STATIONERY*
"Vijaya Nivas", Opp. Pio Mall
Bejai Church Road, Mangalore - 4



Prop. : *Kishore Kumar Kedige* Ph. : 2231524
M. : 9880726325



**KYADIGE AUTOMOBILES**
Opp. to D. P. Stores Main Road, B. C. Road, Bantwal Tq.
*Dealers in : 2 & 3 WHEELERS SPARES*



ಪತ್ರಿಕೆಗೆ ಶುಭ ಬಯಸುವ–
ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಸುರತ್ಕಲ್, ಮಂಗಳೂರು



# ಎಲ್ಲಿದೆ ನನ್ಮನೆ

– ಜಿ. ಕೆ. ಕೋಲ್ಪೆ (ರಚಯಿತ) ಉಡುಪಿ ಮೊಬೈಲ್ : 9449903002

ಅದು ಮೂಲ ಮನೆ
ಹೆಸರಿಗಂಟಿದೆ ಆ ಮನೆ
ಹಿರಿ–ಕಿರಿಯರು ಆಳಿದ ಮನೆ
ಬಾಳ ಬದುಕಿನ ವೈಭವದ ಮನೆ

ಇದು ವೈದ್ಯ ಪರಂಪರೆಯ ಮನೆ
ಬಡವರ ಸಂಜೀವಿನಿ ಈ ಮನೆ
ಅದೇಕೋ ದೈವ ಮುನಿದ ಮನೆ
ನಮ್ಮ ಕೊಂಡಿ ಕಳಚಿದ ಮನೆ

ಬಾಳನರಸಿ ನಿಂತ ಮನೆ
ಕರಿಕಲ್ಲ ಜೋಗುಳ ಮನೆ
ಬಾಳು ರೂಪಿಸಿದ ಮನೆ
ಬಾಳ ಗೆಳತಿ ಬಂದ ಮನೆ

ಸಂಸಾರ ಬೆಳೆದ ಮನೆ
ಅದೇ "ಗೋಮಾಂತಕ" ಮನೆ
ಮುಂದೆ ಹಲವು ಮನೆ
ಜೀವ ನಲಿದ ಮನೆ

ಬೆಳ್ಳಿ ಹಟ್ಟಿಯ ಹಳ್ಳಿ ಮನೆ
ಶಿಕಾರಿಪುರದ ಸಾರ್ಥಕ ಮನೆ
ಸಕಲೇಶಪುರದ ಸ್ವಂತ ಮನೆ
ಮಾರಾಟವಾಯ್ತು ಆ ಮನೆ

ಮೂಡಿಗೆರೆಯ ಮಲ್ನಾಡ ಮನೆ
ಮಗಳಾಂಬೆಯ ಮಡಿಲ ಮನೆ
ತಾಜಮಹಲಿನ ಸುಂದರ ಮನೆ
ರಾಜಧಾನಿಯ ಪಕ್ಕದ ಮನೆ

ಕಾರವಾರದ ಕಡಲಿನ ಮನೆ
ಹಿತಗಾಳಿಯ ಒಡಲಿನ ಮನೆ
ಹಾಸನಾಂಬೆಯ ಮಡಿಲಿನ ಮನೆ
ನೆಮ್ಮದಿ ಪಡೆದ ಆ ಮನೆ

ನನ್ನವಳ ಕನಸು ನನಸಾದ ಮನೆ
ಅದು ಕುಕ್ಕೆ ಪಕ್ಕದ ಭವ್ಯ ಮನೆ
ಮಗಳ ಕಂಕಣ ಭಾಗ್ಯದ ಮನೆ
ಮಗನ ಬಾಳು ಬೆಳಗಿದ ಮನೆ

ಸಂಬಂಧಗಳ ಕೊಂಡಿ ಬೆಸೆದ ಮನೆ
ಧಾರ್ಮಿಕ ಕಾರ್ಯಗಳ ಆಸರೆ ಈ ಮನೆ
ಸಮಾಜ ಚಟುವಟಿಕೆಯ ತಾಣ ಆ ಮನೆ
ಬಂಧು–ಬಾಂಧವರು ಮೆಚ್ಚಿದ ಮನೆ

ಶಾಂತಿ ಅರಸಿ ಕಟ್ಟಿದ ಮನೆ
ಶುಭ ಶೋಭನಾದಿ ನಡೆದ ಮನೆ
ಭೀಮರಥ ಶಾಂತಿ ಆಚರಿಸಿದ ಮನೆ
ಬದಲು ಸಾರಥ್ಯ ಚಿಂತಿಸಿದ ಮನೆ

ಇಂದು, ಅದು ಮಗನ ಮನೆ
ನಾನು ನಡೆದ ಮಗಳ ಮನೆ
ಇಲ್ಲಿದೆ ಪೊಡವಿಗೊಡೆಯನ ಮನೆ
ಮನಃಶಾಂತಿ ದೊರೆತ ಮನೆ

ಅದೋ ಕರೆಯುತಿದೆ "ಗುಡ್ಡೆ ಮನೆ"
ಅದು ಚಿರಶಾಂತಿ ಮನೆ
ಇಲ್ಲಿರುವುದು ಸುಮ್ಮನೆ
ಅಲ್ಲಿರುವುದು ನನ್ಮನೆ.

***ಸೂಚನೆ :*** *ಬಾಳಪಯಣದಲ್ಲಿ ಉದ್ಯೋಗ ನಿಮಿತ್ತ ಮತ್ತು ನಿವೃತ್ತಿ ಜೀವನ ಸವೆಸಿದ ಹಾಗೂ ಪ್ರಕೃತ ನೆಲೆನಿಂತ ಸ್ಥಳಗಳ ಹೆಸರುಗಳನ್ನು ಈ ಕವನದಲ್ಲಿ ಉಲ್ಲೇಖಿಸಲಾಗಿದೆ.*


**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101
*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್‌ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*
ಫೋನ್ : 2531493 (O), 2530851 (R), ಮೊಬೈಲ್ : 9448437893

ಪತ್ರಿಕೆಗೆ ಶುಭ ಬಯಸುವ–

**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
ಪ್ರಮೋದ್ ಟವರ್ಸ್, ಮಂಗಳೂರು

**PRAMOD AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

Prakash Rao Mob : 8453679734, 9986071684
**KRISHNA ELECTRONICS**
Dealers in :
*Electronic Spares & T.V., VCD, DVD etc Service Centre, Car Cds, Speaker, Sub Woofers, USB Players C.C. Camers*
Opp. Service Bus Stand, Rao & Rao Circle, City Towers
MANGALORE - 575 003

Tel : (O) 2223301
Mobile : 9448726499 / 8884284939
*Manish Rao U.*
**NAVA COMPUTER**

*Dealers in : Computers Hardware and Peripherals*
*Computer Sales & Services*
*Alvares Centre, N.H. 17, Nanthoor, Mangalore - 575 005*

*Sri Hari Adyapady*
*Proprietor*
Ph : 0824-2251597 (R)
2252119 (O)
Mobile : 9448344612
9964072489
**SHIVA ELECTRICALS**
2nd Floor, Ozanam Complex, Church Building
Main Road, BAJPE, MANGALORE
*We undertake all types of Electrical, Plumbing and Sanitary works*

ಹೋಮಿಯೋಪತಿ ಹಾಗೂ
ಡಯಟ್ ಸಲಹೆ ಔಷಧಿಗಳಿಗಾಗಿ ಸಂದರ್ಶಿಸಿ.
**ಡಾ. ಸುಶೀಲ ರಾವ್,** ಬಿ.ಎಚ್.ಎಮ್.ಎಸ್.
ಹೋಮಿಯೋಪತಿ ಕನ್ಸಲ್ಟೆಂಟ್ ಆ್ಯಂಡ್ ಡಯಟಿಶಿಯನ್
**ಸ್ಪರ್ಶ ಮೆಡಿಕಲ್ ಸೆಂಟರ್**
ಬೆಂದೂರ್‌ವೆಲ್ ಸರ್ಕಲ್, ಮಂಗಳೂರು - 2
ದೂರವಾಣಿ : 0824-4276666 ಮೊಬೈಲ್ : 9844063805

**PREETHIKA AUTOMOBILES**
2493633
9845851573
*Wholesale & Retail Dealers in :*
*2 & 3 WHEELERS, SPARES & ACCESSORIES*
KARANGALPADY, MANGALORE - 575 003
*Dealers in :*
Minda Switches, M. K. Products, Swiss Auto Products, Power Coils

**Sharekhan**
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

ಪತ್ರಿಕೆಗೆ ಶುಭ ಬಯಸುವ–

**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ಧ್ರುವ್**

# ಗ್ರಾಹಕರ ಆಶೋತ್ತರಕ್ಕೆ ಸ್ಪಂದಿಸುವ ಲ್ಯಾಂಡ್‌ಟ್ರೇಡ್ಸ್‌ನ ಪರಂಪರೆ

*ಎಲ್ಲಾ ಯೋಜನೆಗಳು ಸಕಾಲಿಕ ಸಂಪೂರ್ಣ : **ಶ್ರೀನಾಥ್ ಹೆಬ್ಬಾರ್***



**ಮಂಗಳೂರು, ಡಿ. 9 :**

ಗ್ರಾಹಕರ ವಿಶ್ವಾಸ, ನಂಬಿಕೆ ಮತ್ತು ಬೆಂಬಲದಿಂದ ಲ್ಯಾಂಡ್‌ಟ್ರೇಡ್ಸ್ ಸಂಸ್ಥೆಯ ಎಲ್ಲಾ ನೂತನ ಯೋಜನೆಗಳು ಭರದಿಂದ ಸಾಗುತ್ತಿವೆ ಮತ್ತು ಕೆಲವು ಯೋಜನೆಗಳು ಉದ್ಘಾಟನೆಗೆ ಸಿದ್ಧವಾಗಿವೆ ಎಂದು ಲ್ಯಾಂಡ್‌ಟ್ರೇಡ್ಸ್ ರಿಯಲ್ ಎಸ್ಟೇಟ್ ಆ್ಯಂಡ್ ಡೆವಲಪರ್ಸ್‌ನ ಪ್ರವರ್ತಕ ಕೆ. ಶ್ರೀನಾಥ್ ಹೆಬ್ಬಾರ್ ಅವರು ತಿಳಿಸಿದ್ದಾರೆ.

ಸರ್ವಶ್ರೇಷ್ಠ ಗುಣಮಟ್ಟದ ನಿರ್ಮಾಣ ಕಾರ್ಯದಿಂದ ಕಳೆದ 22 ವರ್ಷಗಳಿಂದ ಲ್ಯಾಂಡ್‌ಟ್ರೇಡ್ಸ್ ಮನೆ ಮಾತಾಗಿದೆ. ನಿಗದಿತ ಸಮಯಕ್ಕಿಂತ ಮೊದಲೇ ಯೋಜನೆಗಳನ್ನು ಅತ್ಯುತ್ತಮವಾಗಿ ನಿರ್ಮಿಸಿ ಗ್ರಾಹಕರಿಗೆ ಒದಗಿಸುವ ಪರಂಪರೆಯನ್ನು ಹೊಂದಿದೆ. ಆಹ್ಲಾದಕರವಾದ ನೈಸರ್ಗಿಕ ಪರಿಸರ, ಸರ್ವ ಆಧುನಿಕ ಸೌಲಭ್ಯಗಳು, ತಾಂತ್ರಿಕ ಪರಿಣತಿ, ಗ್ರಾಹಕರ ಅಭಿರುಚಿಗೆ ತಕ್ಕಂತೆ ನಿರ್ಮಾಣ ಸಂಸ್ಥೆಯನ್ನು ಐಎಸ್‌ಒ ಮಾನ್ಯತೆ, ಕ್ರಿಸಿಲ್ ಪುರಸ್ಕಾರ, ಸ್ಟಾರ್ ಸ್ಥಾನಮಾನ ಪಡೆಯುವಂತೆ ಮಾಡಿದೆ. ದೇಶವಿದೇಶಗಳ ಗ್ರಾಹಕರ ಆದ್ಯತೆಯ ಆಯ್ಕೆ ಲ್ಯಾಂಡ್‌ಟ್ರೇಡ್ಸ್ ಆಗಿದೆ.

**ಪ್ರತಿಷ್ಠಿತ ಯೋಜನೆಗಳು :**

**ಸಾಲಿಟೇರ್ – ಮೌರಿಶ್ಕಾ**

ಲ್ಯಾಂಡ್‌ಟ್ರೇಡ್ಸ್ ವತಿಯಿಂದ ನಗರದ ಹ್ಯಾಟ್‌ಹಿಲ್‌ನಲ್ಲಿ ಅತೀ ಪ್ರತಿಷ್ಠಿತ ಸಾಲಿಟೇರ್ ವಸತಿ ಸಮುಚ್ಚಯದ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ. 29ರಂದು ಶಿಲಾನ್ಯಾಸ ಜರಗಿತ್ತು. ಅತೀ ಕ್ಷಿಪ್ರವಾಗಿ ಸಾಲಿಟೇರ್ 1.73 ಎಕರೆಯಲ್ಲಿ 32 ಅಂತಸ್ತುಗಳಲ್ಲಿ 2–3–4–5 ಬಿಎಚ್‌ಕೆ ಸಹಿತ 144 ಅಪಾರ್ಟ್‌ಮೆಂಟ್‌ಗಳನ್ನು ಹೊಂದಿರುತ್ತದೆ. ಗ್ರಾಹಕರು ಅಮೋಘ ಸ್ಪಂದನ ತೋರಿದ್ದಾರೆ ಎಂದು ಶ್ರೀನಾಥ್ ವಿವರಿಸಿದ್ದಾರೆ. ಕದ್ರಿಕಂಬಳ ಬಳಿ ಲ್ಯಾಂಡ್‌ಟ್ರೇಡ್ಸ್‌ನ ವೈಶಿಷ್ಟ್ಯಪೂರ್ಣ ಮೌರಿಶ್ಕಾ ಪ್ಯಾಲೇಸ್ ವಸತಿ ಸಮುಚ್ಚಯ ಉದ್ಘಾಟನೆಯ ಹಂತದಲ್ಲಿದೆ. ಇಲ್ಲಿ 2 ಎಕರೆಯಲ್ಲಿ 23 ಅಂತಸ್ತುಗಳಲ್ಲಿ 333 ವಸತಿ ಸಮುಚ್ಚಯಗಳು, ಅತ್ಯಂತ ಆಕರ್ಷಕ ವಾಸ್ತುವಿನ್ಯಾಸದಲ್ಲಿ ಅಪಾರ್ಟ್‌ಮೆಂಟ್‌ಗಳು.

**ಸುಂದರೀಕರಣ**

ನಗರದ ಸುಂದರೀಕರಣ ಮತ್ತು ಪರಿಸರ ಸಂರಕ್ಷಣೆಗೆ ಲ್ಯಾಂಡ್‌ಟ್ರೇಡ್ಸ್ ಸದಾ ಸ್ಪಂದಿಸುತ್ತಿದೆ. ಈ ನಿಟ್ಟಿನಲ್ಲಿ ಪ್ರಮುಖವಾದ ಬೆಂದೂರುವೆಲ್ ಪ್ರದೇಶದಲ್ಲಿ 2 ವಿಶಿಷ್ಟ ಯೋಜನೆಗಳಿವೆ :

3 ಬಿಎಚ್‌ಕೆ-ಡ್ಯೂಪ್ಲೆಕ್ಸ್; 4–5 ಬಿಎಚ್‌ಕೆಗಳ 45 ಅಪಾರ್ಟ್‌ಮೆಂಟ್‌ಗಳ 'ಅಟ್ಲಾಂಟಿಸ್'; 3–4 ಬಿಎಚ್‌ಕೆ ಡ್ಯೂಪ್ಲೆಕ್ಸ್‌ಗಳ 28 ಅಪಾರ್ಟ್‌ಮೆಂಟ್‌ಗಳ 'ರೂಪಾಲಿ' ಆಕರ್ಷಕವಾಗಿ ನಿರ್ಮಾಣವಾಗುತ್ತಿದೆ. ಬೆಥನಿ ಕಾನ್ವೆಂಟ್ ಬಳಿ ನೂತನ ವಸತಿ ಸಮುಚ್ಚಯ, ಮಲ್ಲಿಕಟ್ಟೆಯಲ್ಲಿ ಅಕ್ವೇರಿಯಸ್ ವಸತಿ ಸಮುಚ್ಚಯ ಪೂರ್ಣಗೊಳ್ಳುತ್ತಿದೆ.

ನಗರದ ಹೃದಯ ಪ್ರದೇಶದಲ್ಲಿ ಬಲ್ಮಠದಲ್ಲಿ ಪಾರಿನ್ ಎಂಬ ಅತೀ ಪ್ರತಿಷ್ಠೆಯ ವಾಣಿಜ್ಯ ಸಂಕೀರ್ಣ ನಿರ್ಮಾಣವಾಗುತ್ತಿದೆ. ಉರ್ವದಲ್ಲಿ ಮಾರಿಗುಡಿ ಬಳಿ ವಸುಂಧರ ಮತ್ತು ಮಣ್ಣಗುಡ್ಡೆಯಲ್ಲಿ ಸಾಯಿಪ್ರೇಮ್ ಎಂಬ ವಸತಿ–ವಾಣಿಜ್ಯ ಕಟ್ಟಡಗಳು ನಿರ್ಮಾಣವಾಗುತ್ತಿವೆ.

## ಬೆಳ್ಳಿಹಬ್ಬದತ್ತ...

ಲ್ಯಾಂಡ್‌ಟ್ರೇಡ್ಸ್ ಸಂಸ್ಥೆಯು ಬೆಳ್ಳಿಹಬ್ಬದತ್ತ ಸಾಗುತ್ತಿದೆ. ಜನತೆಯ ಆಶೋತ್ತರಗಳ ಬಗ್ಗೆ ಸಂಸ್ಥೆ ಸದಾ ಸ್ಪಂದಿಸುತ್ತಿದೆ. ಈ ನಿಟ್ಟಿನಲ್ಲಿ ಮಂಗಳಾದೇವಿ ಮತ್ತು ಎಮ್ಮೆಕೆರೆಯಲ್ಲಿ ಎರಡು 'ಬಜೆಟ್ ಅಪಾರ್ಟ್‌ಮೆಂಟ್' ಗಳನ್ನು ನಿರ್ಮಿಸಲಾಗುತ್ತದೆ. ಅತ್ಯಂತ ಸ್ಪರ್ಧಾತ್ಮಕ ದರದಲ್ಲಿದು ಲಭ್ಯ ಎಂದು ಶ್ರೀನಾಥ್ ಹೇಳಿದ್ದಾರೆ.

**ಪೂರಕ ಸಂಪರ್ಕ : Landtrades.in**


RAJESH POWER PRESS
PRINTERS & PUBLISHERS
The RIGHT Place for the Customer
DARBE - 574 202, PUTTUR, D. K., KARNATAKA
Phone : (08251) 231696, 231697 & 322386
E-mail : msraghunathrao@hotmail.com

PRAVEEN KUMAR ADYAPADY
ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

ಎಲ್ಐಸಿ ಪಾಲಿಸಿಗಳ ಪುನರುಜ್ಜೀವನ (Lapsed Policy Revival) ಕ್ಲೈಮ್, ಸರೆಂಡರ್, ಲೋನ್, ನಾಮಿನೇಶನ್ ಇತ್ಯಾದಿ ಸರ್ವೀಸ್‌ಗಳನ್ನು ನೀಡಲಾಗುವುದು ಹಾಗೂ ಇಚ್ಛೆಪಟ್ಟಲ್ಲಿ ಅವರಿಗೆ ಹೊಂದಿಕೆಯಾಗುವಂತಹ ಹೊಸ ಪಾಲಿಸಿಗಳನ್ನು ಮಾಡಿಕೊಡಲಾಗುವುದು. ಅಲ್ಲದೆ ಮೋಟಾರ್ ವೆಹಿಕಲ್ ಇನ್ಸೂರೆನ್ಸ್, ಹೆಲ್ತ್ ಇನ್ಸೂರೆನ್ಸ್, ಪಾನ್ ಕಾರ್ಡ್ ಹಾಗೂ ಮ್ಯೂಚುವಲ್ ಫಂಡ್ ಇನ್‌ವೆಸ್ಟ್‌ಮೆಂಟ್ ಮಾಡಿಕೊಡಲಾಗುವುದು.
LIC
ಸಂಪರ್ಕಿಸಿರಿ :
ಪಿ. ರಾಜೇಂದ್ರ ರಾವ್, ಬಿ.ಎಸ್ಸಿ.
ಕುಂಜತ್ತಬೈಲ್, ಮಂಗಳೂರು, ಮೊ. : 9242214842

SHARMA ENTERPRISES
KANKANADY, MANGALORE - 575 002
Mob. : 9844187083
Prop. : Chethan Sharma

ಸಿ. ಯಂ. ರಾವ್ ಕಟಪಾಡಿ
ಯಶಸ್ವಿ ವಾಸ್ತುಶಾಸ್ತ್ರಜ್ಞರು ಮತ್ತು ಜ್ಯೋತಿಷ್ಯರು

ಶ್ರೀ ಮುರಳೀಧರ ರಾವ್
'ಅನುಗ್ರಹ', ಚರ್ಚ್ ರೋಡ್, ಕಟಪಾಡಿ - 574 105
ಮೊಬೈಲ್ : 9741816166
ತಪ್ಪದೆ ವೀಕ್ಷಿಸಿ : ಸ್ಪಂದನ ಟಿ.ವಿ. ವಾಹಿನಿಯಲ್ಲಿ 'ಈಶಾವಾಸ್ತು' ಪ್ರತಿ ಭಾನುವಾರ ಪೂರ್ವಾಹ್ನ 9-00ರಿಂದ 10-00ರ ತನಕ

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
Authorised Dealers for :
Vijai Super GP 150 &
Vikram 3 Wheelers (Petrol & Diesel)


## ನಮ್ಮ ಸಾಧಕರು



ಮಂಗಳೂರಿನ ದೇರೆಬೈಲ್ ಕೊಂಚಾಡಿ ನಿವಾಸಿ **ಡಾ. ಜಯಲಕ್ಷ್ಮೀ ಎಮ್. ಕೆ.**ಯವರು "ಜ್ಞಾನ ಶಕ್ತಿ ಬಳಗ" ಇದರ ಮಹಾಪೋಷಕರಾಗಿದ್ದಾರೆ. ಇವರು ಸರಕಾರಿ ಆಯುರ್ವೇದಿಕ್ ಆಸ್ಪತ್ರೆ, ಕೇರಳ ಇದರಲ್ಲಿ ಸೀನಿಯರ್ ಮೆಡಿಕಲ್ ಆಫೀಸರ್ ಆಗಿದ್ದು ಸುಮಾರು 30ಕ್ಕೂ ಹೆಚ್ಚು ವರ್ಷ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದರು. ಪ್ರಸ್ತುತ ಕೋಟಕ್ಕಲ್ ಆಯುರ್ವೇದಿಕ್ ಫಾರ್ಮಸಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಹಲವಾರು ಸಂಘ-ಸಂಸ್ಥೆಗಳಲ್ಲಿ ಸಕ್ರಿಯರಾಗಿದ್ದು ಶ್ರೀ ಸುಬ್ರಹ್ಮಣ್ಯ ಸಭಾದ ಎಲ್ಲಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ. ಮಗಳು ಆಶಾ ಎಂ. ರಾವ್, ಅಳಿಯ ಡಾ. ಜಗಮೋಹನ್ ರಾವ್ ಹಾಗೂ ಮೊಮ್ಮಗ ಆಕಾಶ್ ಎಂ. ರಾವ್‌ರವರನ್ನು ಹೊಂದಿರುವ ಸಂತೃಪ್ತ ಕುಟುಂಬ ಇವರದು.

ಇವರಿಗೆ ಆಯುರಾರೋಗ್ಯ ಸುಖ ಸಂಪತ್ತುಭರಿತ ಜೀವನವನ್ನು ಹಾರೈಸುತ್ತಿದೆ. **"ಜ್ಞಾನ-ಶಕ್ತಿ ಬಳಗ"**

## ಅಪಾರ ಕೀರ್ತಿ ಗಳಿಸಿ




**ಪ್ರಣವ್ ಬಿ.**

ವೆಸ್ಟರ್ನ್ ಇನ್‌ಸ್ಟಿಟ್ಯೂಟ್ ಆಫ್ ಮಾರ್ಷಿಯಲ್ ಆರ್ಟ್ಸ್ ಇತ್ತೀಚೆಗೆ ಮಂಗಳೂರಿನಲ್ಲಿ ಆಯೋಜಿಸಿದ "ಏಳನೇ ವೆಸ್ಟರ್ನ್ ಓಪನ್ ನೇಶನಲ್ ಲೆವೆಲ್ ಕರಾಟೆ ಚಾಂಪಿಯನ್‌ಶಿಪ್ - 2014"ರಲ್ಲಿ ಹತ್ತರಿಂದ ಹನ್ನೊಂದು ವರುಷ ವಯೋಮಿತಿಯ ಬಾಲಕರ ಕುಮಿಟೆಯಲ್ಲಿ (ಫೈಟಿಂಗ್) ಬೆಳ್ಳಿ ಪದಕ ಹಾಗೂ ಕಟಾದಲ್ಲಿ ಕಂಚಿನ ಪದಕವನ್ನು ಗಳಿಸಿದ 'ಪ್ರಣವ್ ಬಿ.' ಕಾಸರಗೋಡು ಜಿಲ್ಲೆಯ ಪೆರ್ಲ ಶ್ರೀ ಸತ್ಯನಾರಾಯಣ ಶಾಲೆಯ ಆರನೇ ತರಗತಿ ವಿದ್ಯಾರ್ಥಿ. ಕಲಿಕೆಯಲ್ಲಿ ಮುಂಚೂಣಿಯಲ್ಲಿರುವ ಈತ ಶಾಲಾ ಕಲೋತ್ಸವಗಳಲ್ಲಿ, ಸಾರ್ವಜನಿಕ ಸಮಾರಂಭಗಳ ಛದ್ಮವೇಷ, ಕನ್ನಡ-ಇಂಗ್ಲಿಷ್-ಸಂಸ್ಕೃತ ಭಾಷಣಗಳಲ್ಲಿ, ಗೀತಾ ಕಂಠಪಾಠ, ಸಂಗೀತ ಸ್ಪರ್ಧೆಗಳಲ್ಲಿ ಅನೇಕ ಬಹುಮಾನಗಳನ್ನು ಪಡೆದಿರುತ್ತಾನೆ. ಕಳೆದ ವರ್ಷ ಮಂಜೇಶ್ವರ ಉಪ ಜಿಲ್ಲಾ ಶಾಲಾ ಮಟ್ಟದಲ್ಲಿ ಸಂಸ್ಕೃತ ಸ್ಕಾಲರ್‌ಶಿಪ್ ಗಳಿಸಿದ್ದಾನೆ.

ಈತ ಪೆರ್ಲದ ಸಿವಿಲ್ ಇಂಜಿನಿಯರ್ ಪ್ರಶಾಂತ ಬಜಕೂಡ್ಲು ಮತ್ತು ನಾಗವೇಣಿ ದಂಪತಿಗಳ ಸುಪುತ್ರ.

## ಭವತಿ ಭಿಕ್ಷಾಂ ದೇಹಿ



ಇಡ್ಯಾ ಸುರತ್ಕಲ್‌ನ ಶ್ರೀಮತಿ ಮತ್ತು ಶ್ರೀ ಗೋಪಾಲಕೃಷ್ಣ ಇವರ ಸುಪುತ್ರ **ಚಿ| ಅನಿಕೇತ್**ನ ಬ್ರಹ್ಮೋಪದೇಶ ಕಾರ್ಯಕ್ರಮವು ದಿನಾಂಕ 26-12-2014ನೇ ಶುಕ್ರವಾರದಂದು ಸ್ವಗೃಹದಲ್ಲಿ ನಡೆಯಿತು.

## ಹೊಸ ಬಾಳಿನ ಹೊಸಿಲಲಿ... ನಿಂತಿರುವ...



ಆರೂರು ದೇವಸ್ಥಾನ ಬೆಟ್ಟು ಶ್ರೀಮತಿ ರಾಗಿಣಿ ಮತ್ತು ಶ್ರೀ ರಾಮಕೃಷ್ಣ ರಾವ್ ಇವರ ಪುತ್ರ **ಚಿ| ರಾಕೇಶ್** ಹಾಗೂ ತಾಳೆಪ್ಪಾಡಿ ಶ್ರೀಮತಿ ಗಾಯಿತ್ರಿ ಮತ್ತು ಶ್ರೀ ಹರಿಶ್ಚಂದ್ರ ಇವರ ಪುತ್ರಿ **ಚಿ| ಸೌ| ಹರ್ಷಿತ** ಇವರ ವಿವಾಹವು ದಿನಾಂಕ 12-12-2014ನೇ ಶುಕ್ರವಾರದಂದು ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾಸದನದಲ್ಲಿ ನಡೆಯಿತು.

✲ ✲ ✲

ಶ್ರೀಮತಿ ವಿಜಯಲಕ್ಷ್ಮೀ ಮತ್ತು ಡಾ. ಕೆ. ಕೆ. ಶ್ಯಾನುಭೋಗ್‌ರ ಸುಪುತ್ರ **ಡಾ. ಅಭಿಜಿತ್**ನ ವಿವಾಹವು ದಿನಾಂಕ 15-12-2014ನೇ ಸೋಮವಾರದಂದು ಕಾಸರಗೋಡು ಚಿನ್ಮಯಾ ತೇಜಸ್ ಸಭಾಂಗಣದಲ್ಲಿ ನಡೆಯಿತು.

✲ ✲ ✲

ಬೆಳ್ತಂಗಡಿ ಶ್ರೀಮತಿ ಪುಷ್ಪಲತ ಮತ್ತು ಶ್ರೀ ಜಯರಾಮ ರಾವ್ ಇವರ ಪುತ್ರ **ಚಿ| ಸಂದೇಶ್** ಹಾಗೂ ಕಾಸರಗೋಡು ತ್ರಿಕ್ಕನ್ನಾಡು ಶ್ರೀಮತಿ ಅನ್ನಪೂರ್ಣ ಮತ್ತು ಶ್ರೀ ವಿದ್ಯಾಸಾಗರ ಇವರ ಪುತ್ರಿ **ಚಿ| ಸೌ| ಅರ್ಚನ** ಇವರ ವಿವಾಹವು ದಿನಾಂಕ 15-12-2014ನೇ ಸೋಮವಾರದಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾಸದನದಲ್ಲಿ ನಡೆಯಿತು.

✲ ✲ ✲

ಮಂಗಳೂರಿನ ಶ್ರೀಮತಿ ಉಷಾ ಮತ್ತು ಶ್ರೀ ಲಕ್ಷ್ಮೀಶ ಎನ್. ಇವರ ಪುತ್ರ **ಚಿ| ಅವಿನಾಶ್** ಹಾಗೂ ಶ್ರೀಮತಿ ಗಾಯಿತ್ರಿ ಮತ್ತು ಶ್ರೀ ವೈ. ಪ್ರಕಾಶ ಕುಮಾರ ಇವರ ಪುತ್ರಿ **ಚಿ| ಸೌ| ಪವಿತ್ರ** ಇವರ ವಿವಾಹವು ದಿನಾಂಕ 25-12-2014ನೇ ಗುರುವಾರದಂದು ಉಡುಪಿ ಕುಂಜಿಬೆಟ್ಟು ಶಾರದಾ ಕಲ್ಯಾಣ ಮಂಟಪದಲ್ಲಿ ನಡೆಯಿತು.

✲ ✲ ✲

ಶ್ರೀಮತಿ ಮತ್ತು ಶ್ರೀ ಮೋಹನ್ ರಾವ್ ತಾಳೆಪ್ಪಾಡಿ, ಪುತ್ತೂರು ಇವರ ಪುತ್ರ **ಚಿ| ಮನೋಜ್ ಕುಮಾರ್** ಹಾಗೂ ಶ್ರೀಮತಿ ಮತ್ತು ಶ್ರೀ ರಮಾನಂದ ರಾವ್ ಕುಡುಪು, ಮಂಗಳೂರು ಇವರ ಪುತ್ರಿ **ಚಿ| ಸೌ| ರಮ್ಯಲಕ್ಷ್ಮೀ** ಇವರ ವಿವಾಹವು ದಿನಾಂಕ 28-12-2014ನೇ ಭಾನುವಾರದಂದು ಕುಲಶೇಖರದ ಶ್ರೀ ವೀರನಾರಾಯಣ ದೇವಸ್ಥಾನದ ಸಭಾಭವನದಲ್ಲಿ ನಡೆಯಿತು.

✲ ✲ ✲

ಶ್ರೀಮತಿ ಸುಹಾಸಿನಿ ಮತ್ತು ಶ್ರೀ ನಂದಿಕೂರು ಮೋಹನ ರಾವ್ ಇವರ ಪುತ್ರ **ಚಿ| ಪ್ರಭಾತ್ ಕುಮಾರ್** ಹಾಗೂ ಶ್ರೀಮತಿ ಪೂರ್ಣಿಮಾ ಮತ್ತು ಶ್ರೀ ನಂದಾವರ ಕೌಳಿಗೆ ದಿನಕರ ರಾವ್ ಇವರ ಪುತ್ರಿ **ಚಿ| ಸೌ| ಪಲ್ಲವಿ** ಇವರ ವಿವಾಹವು ದಿನಾಂಕ 29-12-2014ನೇ ಸೋಮವಾರದಂದು ಮಂಗಳೂರಿನ ಪ್ರತಾಪ್ ನಗರದಲ್ಲಿನ ಸಂಘನಿಕೇತನದಲ್ಲಿ ನಡೆಯಿತು.

✲ ✲ ✲

ಶ್ರೀಮತಿ ಶೋಭರಾಣಿ ಮತ್ತು ಕುಂಡಲ ಶ್ರೀ ಪುಂಡರಿಕಾಕ್ಷ ಆಚಾರ್ಯ ಇವರ ಪುತ್ರ **ಚಿ| ಅಶ್ವಿನ್** ಹಾಗೂ ಶ್ರೀಮತಿ ಮೀರಾ ಸೀತಾರಾಮ ಮತ್ತು ಶ್ರೀ ಸೀತಾರಾಮ ಮಯ್ಯ ಇವರ ಪುತ್ರಿ **ಚಿ| ಸೌ| ಶ್ರೀನಿಧಿ** ಇವರ ವಿವಾಹವು ದಿನಾಂಕ 29-12-2014ನೇ ಸೋಮವಾರದಂದು ಮಾಣಿ ಶ್ರೀ ರಾಮಚಂದ್ರಾಪುರ ಮಠದ ಜನಭವನದಲ್ಲಿ ನಡೆಯಿತು.





Prop. : *Pradeep V. Rao*

M. : 9880093799
9844541917

**VYBHAV ENTERPRISES**

All Mobile Recharges & DTH Recharges

**BALMATTA REAL ESTATE**

**Contact for Sites, Houses, Rental Houses & Flats and all Documentation**

**Ground Floor, Dwaraka Complex**
**Arya Samaja Road, Balmatta, Mangalore - 575 003**
E-mail : pradeepvrao55@gmail.com

ಪತ್ರಿಕೆಗೆ ಶುಭ ಬಯಸುವ-



**ಶ್ರೀ ಶಾಂತರಾಮ್ ರಾವ್ ಕೆ.**
**ಶ್ರೀಮತಿ ರಮ್ಯ ಎಸ್. ರಾವ್**
**ಶರಣ್ಯ ಎಸ್. ರಾವ್**

ಪತ್ರಿಕೆಗೆ ಶುಭ ಬಯಸುವ-



**ಶ್ರೀ ಸೋಮಶೇಖರನ್**
**ಮತ್ತು**
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**

## ಆತ್ಮೀಯ ಸಮಾಜ ಬಾಂಧವರಲ್ಲಿ ವಿನಂತಿ

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಪೂರ್ಣ ಅನುಗ್ರಹದಿಂದ ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದ ನೂತನ ಶಿಲಾಮಯ ಗರ್ಭಗುಡಿಯ ಕೆಲಸವೂ ಪೂರ್ಣಗೊಂಡಿದ್ದು ಇನ್ನು ಸುತ್ತುಪೌಳಿ, ಗೋಪುರ ನಿರ್ಮಾಣದ ಕಾರ್ಯವು ಭರದಿಂದ ನಡೆಯುತ್ತಿದೆ. ಈ ಕಾರ್ಯವು ಪೂರ್ಣವಾಗಬೇಕಾದರೆ ರೂ. 50 ಲಕ್ಷ ಸಂಗ್ರಹವಾಗಬೇಕಾಗಿದೆ.

ಸಮಾಜ ಬಾಂಧವರು ಶ್ರೀ ದೇವಿಯ ಪುಣ್ಯ ಕೆಲಸಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ದೇಣಿಗೆಯನ್ನು ನೀಡಿ ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.

| | |
|---|---|
| **ಆಡಳಿತ ಮಂಡಳಿ** | **ಜೀರ್ಣೋದ್ಧಾರ ಸಮಿತಿ** |
| **ಅಧ್ಯಕ್ಷರು** ಮತ್ತು **ಸದಸ್ಯರು** | **ಅಧ್ಯಕ್ಷರು** ಮತ್ತು **ಸರ್ವ ಸದಸ್ಯರು** |
| ಮೊಬೈಲ್ : 9901247080 | ಮೊಬೈಲ್ : 9980799399 |

***ಚೆಕ್ ನೀಡುವವರು :***

**ಜೀರ್ಣೋದ್ಧಾರ ಸಮಿತಿ, ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ**

**S.B. A/c. 6042500103445201**

**ಜ್ಞಾನ – ರುಚಿ**

## ಮಲ್ಲಿಗೆ ಇಡ್ಲಿ

2 ಗ್ಲಾಸ್ ಅಕ್ಕಿ, 2 ಗ್ಲಾಸ್ ಬೆಳ್ತಿಗೆ ಅನ್ನ, 1 ತಟ್ಟೆ ತೆಂಗಿನತುರಿ, ರುಚಿಗೆ ಉಪ್ಪು, 1 ಸ್ಪೂನ್ ಸಕ್ಕರೆ, ಬ್ರೆಡ್ ಈಸ್ಟ್ ಅರ್ಧ ಚಮಚ.

**ಮಾಡುವ ವಿಧಾನ :** ಮೇಲೆ ಹೇಳಿದ ಎಲ್ಲಾ ಸಾಮಾನುಗಳನ್ನು (ಈಸ್ಟ್ ಬಿಟ್ಟು) ಇಡ್ಲಿ ಹಿಟ್ಟಿನಂತೆ ರುಬ್ಬಬೇಕು. ನಂತರ ಈಸ್ಟನ್ನು ಹಾಕಿ ಚೆನ್ನಾಗಿ ಸೌಟಿನಲ್ಲಿ ತಿರುಗಿಸಿ ಇಡಬೇಕು. ಮರುದಿನ ಇಡ್ಲಿ ತಟ್ಟೆಯಲ್ಲಿ ಬೇಯಿಸಬೇಕು. ಮೆತ್ತಗಾದ ರುಚಿಯಾದ ಇಡ್ಲಿ ರೆಡಿ.

– ***ಶ್ರೀಮತಿ ವತ್ಸಲಾ ಯೋಗೀಶ್ ರಾವ್,*** *ಎಳಿಂಜೆ*

**ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತು, ಮೂಡಬಿದಿರೆ**

## ಮಹಾಸಭೆ

**ತಾ. 15–06–2014ನೇ** ರವಿವಾರ ಪೂರ್ವಾಹ್ನ ಗಂಟೆ 9–30ಕ್ಕೆ ಸರಿಯಾಗಿ ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತು, ಮೂಡುಬಿದಿರೆ ಇದರ **23ನೇ ಮಹಾಸಭೆ**ಯು ಮೂಡುಬಿದಿರೆ ಸಮಾಜ ಮಂದಿರದಲ್ಲಿ ನಡೆಯಿತು.

ಈ ಮಹಾಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಶ್ರೀ ಯಂ. ದೇವಾನಂದ ಭಟ್ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಪಡುಬಿದ್ರಿಯ ಶ್ರೀ ದಿವಾಕರ ರಾಯರು ಆಗಮಿಸಿ ಸೂಕ್ತ ಸಲಹೆ–ಸೂಚನೆಗಳನ್ನು ನೀಡಿದರು. 2014–2015ನೇ ಸಾಲಿಗೆ ನೂತನ ಆಡಳಿತ ಮಂಡಳಿಯನ್ನು ಸರ್ವಾನುಮತದಿಂದ ಆರಿಸಲಾಯಿತು.

| | |
|---|---|
| ಗೌರವಾಧ್ಯಕ್ಷರು : | **ಬಿ. ನಾರಾಯಣ ರಾವ್** |
| ಅಧ್ಯಕ್ಷರು : | **ಬೊಕ್ಕಸ ಚಂದ್ರಶೇಖರ ರಾವ್** |
| ಕಾರ್ಯದರ್ಶಿ : | **ಯಂ. ಜಗದೀಶ್ ರಾವ್ ಆಲಂಗಾರು** |
| ಉಪಾಧ್ಯಕ್ಷರು : | **ಗಿರೀಶ್ ಕುಮಾರ್ ಕಳಮೆ** |
| | **ಮಲ್ಲಿಕಾ ಗಣೇಶ್ ರಾವ್** |
| | **ಕುಮಾರಸ್ವಾಮಿ,** ನಿವೃತ್ತ ಅಧ್ಯಾಪಕರು |
| ಸಂಘಟನಾ ಕಾರ್ಯದರ್ಶಿ : | **ರಾಯಿ ರಾಜ್‌ಕುಮಾರ್** |
| ಖಜಾಂಚಿ : | **ವಾದಿರಾಜ ರಾವ್ ಪುತ್ತಿಗೆ** |
| ಸಹಕಾರ್ಯದರ್ಶಿ : | **ಸುಭಾಸ್‌ಚಂದ್ರ ರಾವ್,** ಮುಖ್ಯೋಪಾಧ್ಯಾಯರು |
| ಗೌರವ ಸಲಹೆಗಾರರು : | **ಬಿ. ಗಣೇಶ ರಾವ್** |
| | **ಯಂ. ದೇವಾನಂದ ಭಟ್** |
| | **ರಾಘವೇಂದ್ರ ಹೆಬ್ಬಾರ್** |

ಆಡಳಿತ ಮಂಡಳಿಯ ಸದಸ್ಯರು :

| | |
|---|---|
| **ಪಿ. ಶ್ರೀನಿವಾಸ್ ರಾವ್** | **ಬಿ. ಸುರೇಶ್ ರಾವ್** |
| **ಬಿ. ಭಾಸ್ಕರ್ ರಾವ್** | **ಕವಿತಾ ಚಂದ್ರಶೇಖರ್** |
| **ಕೇಳ ಸೋಮಶೇಖರ ರಾವ್** | **ವೃಂದಾ ಜಗದೀಶ್** |
| **ಭೋಜ ರಾವ್ ಶಿರ್ತಾಡಿ** | **ಸುಮ ರಾಜಕುಮಾರ್** |
| **ಬಿ. ಜಯರಾಮ ರಾವ್** | **ಪ್ರೀತಿ ಸದಾಶಿವ** |
| **ಚಂದ್ರಶೇಖರ ರಾವ್ ದೊಡ್ಡಮನೆ** | **ಬಿ. ನಾರಾಯಣ ರಾವ್ ನಾಗರಕಟ್ಟೆ** |
| **ಬಿ. ಉಮೇಶ ರಾವ್** | |

**Samavarthane :** This event is carried out a day before the wedding at boy's house. This day, the boy who has returned from the Gurukula (master's house) after education, gets ready to go to Kashi (Varanasi) to be an ascetic, but his maternal uncle stops him advising him to take the path of wedded life. The groom accepts his advice and returns home.

**ವಿವಾಹಪೂರ್ವ ಆಚರಣೆಗಳು**



**ಸಮಾವರ್ತನೆ ಅಥವಾ ಕಾಶೀಯಾತ್ರೆ :** ಸಮಾವರ್ತನೆ ಎಂದರೆ 'ಚೆನ್ನಾಗಿ ಹಿಂತಿರುಗುವುದು' ಎಂದರ್ಥ. ಉಪನಯನದಂದು ಗುರುಕುಲ ಪ್ರವೇಶಿಸಿದ ವಟುವು ಓದು ಮುಗಿಸಿ ಸ್ನಾತಕನಾಗಿ ಹಿಂದಿರುಗುತ್ತಾನೆ. ಗುರುಗಳು ಇವನಿಗೆ ಮದುವೆಯಾಗು. ನಿನ್ನ ಸಂತಾನವನ್ನು ಮುಂದು ವರಿಸು ಎಂದು ಆಶೀರ್ವದಿಸಿ ಕಳುಹಿಸುತ್ತಾರೆ. ಲೋಕಜ್ಞಾನಕ್ಕಾಗಿ ಕಚ್ಚೆ, ಪೇಟ, ಛತ್ರ, ದಂಡಗಳಿಂದ ಕೂಡಿದ ವರ ಕಾಶೀಯಾತ್ರೆಗೆ ತೆರಳಲು ಇಚ್ಛಿಸಿದಾಗ ಸೋದರಮಾವ ಮುಂತಾದ ಸಂಬಂಧಿಗಳು ತಡೆದುದರಿಂದ ಹಿಂತಿರುಗಿ ಬಂದು ಅಗ್ನಿಸನ್ನಿಧಿಯಲ್ಲಿ ಕುಳಿತು ಆಹುತಿಯಿತ್ತು ಸಮಾಹೃತನಾಗುತ್ತಾನೆ.

## ಚಿಣ್ಣರ ಆರ್ಟ್ ಗ್ಯಾಲರಿ

**ಚಿತ್ರ 1**



**ಚಿತ್ರ 2**



**ಈ ಮೇಲಿನ ಎರಡು ಚಿತ್ರಗಳಲ್ಲಿರುವ 8 ವ್ಯತ್ಯಾಸಗಳನ್ನು ಗುರುತಿಸಿ.**



**ಅನಘಾ ರಾವ್,** 6ನೇ ತರಗತಿ

ಜ್ಞಾನಶಕ್ತಿ '**ಚಿಣ್ಣರ ಆರ್ಟ್ ಗ್ಯಾಲರಿ**'ಗೆ 12 ವರ್ಷದ ಒಳಗಿನ ಮಕ್ಕಳು ತಾವು ರಚಿಸಿದ ರೇಖಾಚಿತ್ರ ಮತ್ತು ಪೈಂಟಿಂಗ್‌ಗಳನ್ನು ಕಳುಹಿಸಬಹುದು. ಇದರೊಂದಿಗೆ ಅವರ ಭಾವಚಿತ್ರ ಕಳುಹಿಸಿದಲ್ಲಿ ಪ್ರಕಟಿಸಲಾಗುವುದು. ಭಾವಚಿತ್ರಗಳನ್ನು ಹಿಂತಿರುಗಿಸಲಾಗುವುದಿಲ್ಲ. **ನಮ್ಮ ವಿಳಾಸ : ಅಂಚೆ ಪೆಟ್ಟಿಗೆ ನಂ. 206, ದರ್ಬೆ – 574 202, ಪುತ್ತೂರು, ದ. ಕ.**





## ಜ್ಞಾನ – ನುಡಿ

ಯುದ್ಧಭೂಮಿಯಲ್ಲಿ ದಶದಿಕ್ಕುಗಳಿಂದಲೂ ಬರುವ ಬಾಣಗಳನ್ನು ಆನೆಯೊಂದು ಎದುರಿಸುವಂತೆ ನಾನು ನಿಂದನೆಗಳನ್ನು ಎದುರಿಸುತ್ತೇನೆ.

– *ಗೌತಮ ಬುದ್ಧ*

## ಜ್ಞಾನ – ನಗೆ

**ಮಗಳು :** ಅಮ್ಮಾ ಆ ಹುಡುಗ ರೂಪವಂತ, ಗುಣವಂತ, ಹಣವಂತ, ಎಲ್ಲಾ ಸರಿ! ಆದರೆ ಅವನ ತಲೆಯಲ್ಲಿ ಜುಟ್ಟಿದೆ.

**ತಾಯಿ :** ಜುಟ್ಟಿದ್ದರೇನಂತೆ? ಹೇಗಿದ್ದರೂ ಅದು ಮುಂದೆ ನಿನ್ನ ಕೈಲೇ ಇರುತ್ತೆ ತಾನೇ? ಸುಮ್ಮನೆ ಮದುವೆಯಾಗು.

## ಜ್ಞಾನ – ಗಾದೆ

ಕುರುಡನ ಕೈಟ್ ಕನ್ನಡಿ ಕೊರಿಲೆಕ್ಕ
ಕೆಲಸ ಆಯಿಬೆತ್ತ್ ದೇವೆರ್ ಓಳೊ ನಮ ಓಳೊ
ಕೆಲ್ಸದಾಯೆ ಪಂಡಿನೆನ್, ಸೂತ್ ತೆರಿಯಂತೆ ನಂಬೆರೆ ಬಲ್ಲಿ.

## ಜ್ಞಾನ – ವಿಸ್ಮಯ

ಗುಂಪಿನಲ್ಲಿದ್ದಾಗ ಯಾರಾದರೂ 'ಗ್ಯಾಸ್' ಬಿಟ್ಟರೆ ಮೂಗು ಮುಚ್ಚಿಕೊಳ್ಳುವ ಹಾಗೂ ಇಲ್ಲ, ಅದು ಶಿಷ್ಟಾಚಾರಕ್ಕೆ ಅವಮಾನ ಮಾಡಿದಂತೆ. ಹಾಗಂತ ಸಹಿಸಿ ಕೊಳ್ಳುವ ಹಾಗೂ ಇಲ್ಲ. ಅದಕ್ಕೆಂದೇ ಫ್ರಾನ್ಸ್‌ನ ಕ್ರಿಶ್ಚಿಯನ್ ಪೋಯಿನ್ ಶೋವೆಲ್ ಎಂಬಾತ ಗ್ಯಾಸ್‌ಗೆ ಫ್ರೆಂಚ್ ಸುಗಂಧ ಲೇಪಿಸುವ ಮಾತ್ರೆ ಕಂಡುಹಿಡಿದಿದ್ದಾನಂತೆ. 'ಕ್ರಾಪ್ಟಿ ಇಂಪ್' ಎಂಬ ಈ ಮಾತ್ರೆ ಸೇವಿಸಿದರೆ ಸಾಕು. ನೀವು ಬಿಡುವ ಗ್ಯಾಸ್ ಚಾಕೊಲೇಟ್, ರೋಸ್ ಮೊದಲಾದ ಸುಗಂಧ ಬೀರುವುದಂತೆ.

Please log on to : www.subramanyasabha.com For all information on Subramanya Sabha and Address of Stanika in Mangalore, Bantwal & Moodabidri

*Publisher : Sri C. S. Rao, President, Shree Subrahmanya Sabha (R.), Kodialbail, Mangalore - 3*

*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*